# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@yahoo.com

6 ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು-560 009.

ಸಂಖ್ಯೆ: ಕೆಇಪಿಜಿಟಿ/ಪಿ10/2014-15/ Cys-14 ದಿನಾಂಕ: 16 JUN 2014

ಗೆ,

1. ಎಲ್ಲಾ ಕಾರ್ಯ ನಿರ್ವಾಹಕ ಇಂಜಿನಿಯರ್/ಎಲ್ಲಾ ಲೆಕ್ಕಾಧಿಕಾರಿಗಳು,
   ಕಾರ್ಯ ಮತ್ತು ಪಾಲನಾ ವಿಭಾಗ,
   ಬೆವಿಕಂ/ಮವಿಸಕಂ/ಹುವಿಸಕಂ/ಗುವಿಸಕಂ/ಚಾವಿಸಕಂ.

2. ಎಲ್ಲಾ ಲೆಕ್ಕಾಧಿಕಾರಿಗಳು,
   ಆಂತರಿಕ ಪರಿಶೋಧನೆ
   ಬೆವಿಕಂ/ಮವಿಸಕಂ/ಹುವಿಸಕಂ/ಗುವಿಸಕಂ/ಚಾವಿಸಕಂ.

ಮಾನ್ಯರೇ,

ವಿಷಯ: ಪ್ರತಿ ತಿಂಗಳು ಪಿಂಚಣಿ ಹಾಗೂ ಕುಟುಂಬ ಪಿಂಚಣಿ ಪಾವತಿಸಲು ಸಲ್ಲಿಸುತ್ತಿರುವ ನಿಧಿ ಕೋರಿಕೆ ವಿಳಂಬವಾಗಿ ಸಲ್ಲಿಸುತ್ತಿರುವ ಕುರಿತು.

ಉಲ್ಲೇಖ: 1. ಈ ಕಛೇರಿ ಪತ್ರ ಸಂಖ್ಯೆ: ಕೆಇಪಿಜಿಟಿ/ಪಿ10/2011-12/ಸಿವೈಎಸ್-3 ದಿನಾಂಕ 08.12.2011.
2. ಈ ಕಛೇರಿ ಪತ್ರ ಸಂಖ್ಯೆ: ಕೆಇಪಿಜಿಟಿ/ಪಿ10/2013-14/ಸಿವೈಎಸ್-4 ದಿನಾಂಕ 06.05.2013.

*******

ಪ್ರತಿ ತಿಂಗಳು ಪಿಂಚಣಿ/ಕುಟುಂಬ ಪಿಂಚಣಿ ಪಾವತಿಸುವ ಸಲುವಾಗಿ ಪಿಂಚಣಿ ಬಟವಾಡೆ ಮಾಡುತ್ತಿರುವ ಲೆಕ್ಕ ಘಟಕಗಳು ನಿಧಿ ಕೋರಿಕೆಯನ್ನು ಪಿಂಚಣಿ & ಉಪದಾನ ಟ್ರಸ್ಟ್‌ಗೆ ಸಲ್ಲಿಸುತ್ತಿದ್ದು, ಏಪ್ರಿಲ್-2014 ಹಾಗೂ ಮೇ-2014ರ ಮಾಹೆಯ ನಿಧಿ ಕೋರಿಕೆಯನ್ನು ಪರಿಶೀಲಿಸಿದಾಗ ಸುಮಾರು ಎಲ್ಲಾ ಲೆಕ್ಕ ಘಟಕಗಳು ತಾರೀಖು 21ರ ನಂತರ ಸಲ್ಲಿಸಿರುವುದು ಕಂಡು ಬಂದಿರುತ್ತದೆ ಹಾಗೂ ಹಲವಾರು ಲೆಕ್ಕ ಘಟಕಗಳು ಇ-ಮೇಲ್ ಮುಖಾಂತರ ತಾರೀಖು 25ರ ನಂತರ ಸಲ್ಲಿಸಿರುತ್ತಾರೆ.

ಈಗಾಗಲೆ ಉಲ್ಲೇಖಿತ ಪತ್ರಗಳಲ್ಲಿ ಪ್ರತಿ ತಿಂಗಳು 20ನೇ ತಾರೀಖಿನೊಳಗಾಗಿ ನಿಧಿ ಕೋರಿಕೆಯನ್ನು ಈ ಕಛೇರಿಗೆ ತಲುಪಿಸುವಂತೆ ಸೂಚಿಸಲಾಗಿದ್ದರೂ, ವಿಳಂಬ ನೀತಿ ಅನುಸರಿಸುತ್ತಿರುವುದರಿಂದ ನಿಧಿ ಕೋರಿಕೆಯನ್ನು ಪರಿಶೀಲಿಸಿ ನಿಧಿ ವರ್ಗಾವಣೆ ಮಾಡುವ ಪ್ರಕ್ರಿಯೆಗೆ ಗೊಂದಲದ ವಾತಾವರಣ ಸೃಷ್ಟಿಯಾಗಿ ಪರಿಶೀಲನೆಯಲ್ಲಿ ವ್ಯತ್ಯಯವಾಗುವ ಹಾಗೂ ನಿಧಿ ವರ್ಗಾವಣೆಗೆ ವಿಳಂಬವಾಗುವ ಸಂಭವವಿರುತ್ತದೆ. ಆದ್ದರಿಂದ ಈಗಾಗಲೆ ಸೂಚಿಸಿರುವಂತೆ ತಮ್ಮ ವ್ಯಾಪ್ತಿಗೆ ಬರುವ ಲೆಕ್ಕ ಘಟಕಗಳು ನಿಧಿ ಕೋರಿಕೆಯನ್ನು ಪ್ರತಿ ತಿಂಗಳು 20 ನೇ ದಿನಾಂಕದೊಳಗೆ ತಪ್ಪದೇ ಈ ಕಛೇರಿಗೆ ತಲುಪಿಸುವಂತೆ ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಸಂಭವಿಸಬಹುದಾದ ವ್ಯತ್ಯಯಕ್ಕೆ ನಿಮ್ಮನ್ನೆ ನೇರವಾಗಿ ಹೊಣೆಗಾರರನ್ನಾಗಿಸಬೇಕಾಗುತ್ತದೆಂದು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

16/6/14

ನಿಯಂತ್ರಣಾಧಿಕಾರಿ ಮತ್ತು ವ್ಯವಸ್ಥಾಪಕ ಟ್ರಸ್ಟಿ,
ಕವಿಪ್ರನಿನಿ & ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್.

ಪ್ರತಿಗಳು:

1. ಆರ್ಥಿಕ ಸಲಹೆಗಾರರು (ಲೆ & ಸಂ), ಕವಿಪ್ರನಿನಿ, ಬೆಂಗಳೂರು ರವರ ಅವಗಾಹನೆಗಾಗಿ.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು (ಹ & ವಾ), ಬೆವಿಕಂ, ಬೆಂಗಳೂರು ರವರ ಅವಗಾಹನೆಗಾಗಿ.
3. ಆರ್ಥಿಕ ಸಲಹೆಗಾರರು, ಚಾವಿಸನಿ/ಗುವಿಸಕಂ/ಹುವಿಸಕಂ/ಮವಿಸಕಂ ರವರ ಅವಗಾಹನೆಗೆ ಮತ್ತು ಮಾಹಿತಿಗೆ ಹಾಗೂ ಈ ಅಂಶಗಳನ್ನು ಪಾಲಿಸುವಂತೆ ತಮ್ಮ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಬಂಧಪಟ್ಟ ಎಲ್ಲಾ ಲೆಕ್ಕಾಧಿಕಾರಿಗಳಿಗೆ ಸೂಚಿಸಲು ಕೋರಲಾಗಿದೆ.
4. ಉಲೆನಿ-1/ಲೆ/ಸಲೆ/ಹಿಸ-2 ಪಿಂಚಣಿ ಮತ್ತು ಉಪದಾನ ಟ್ರಸ್ಟ್/ಮು.ಕ/ಕ.ಕ